**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 1767/2020**

**ಪಿ ಡಬ್ಲೂ - 1**

**ಸಿ ಡಬ್ಲೂ - 1**

**ದಿಃ 29.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಯಶವಂತ್**

**ತಂದೆಯ ಹೆಸರು ಃ ಗಂಗರಾಮಯ್ಯ**

**ವಯಸ್ಸು ಃ 25 ವರ್ಷ**

**ಉದ್ಯೋಗ ಃ ಖಾಸಗಿ ಕೆಲ**

**ವಿಳಾಸ ಃ ಖನಸವಾಡಿ, ದೊಡ್ಡಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ದಿ.18.04.2020 ರಂದು ನನ್ನ ತಂದೆ ಗಂಗರಾಮಯ್ಯ ಹಸು ಮೇಯಿಸಲು ಕೆರೆಯ ಬಳಿ ಸುಮಾರು ಬೆಳಗ್ಗೆ 11-30 ಗಂಟೆ ಬಂದಿದ್ದರು. ನನ್ನ ತಂದೆ ಖನಸವಾಡಿ ಖಾನಿಮಠ ರಸ್ತೆಯ ಹತ್ತಿರ ಕೆರೆಯ ಬಳಿ ನಿಂತಿದ್ದರು, ಆಗ ಒಂದು ಲಾರಿ ಕಂಟೇನರ್ ಸಂಖ್ಯೆ 0184 ಗಾಡಿಯ ಪೂರ್ತಿ ಸಂಖ್ಯೆ ನೆನಪಾಗುತ್ತಿಲ್ಲ, ಅತಿವೇಗ ಹಾಗೂ ಅಜಾಗೂರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆರೆಯ ತಿರುವಿನಲ್ಲಿ ನಿಯಂತ್ರಣ ತಪ್ಪಿ, ಉರುಳಿ ಲಾರಿಯು ಜಾರಿಕೊಂಡು ಹೋಗಿ ರಸ್ತೆಯ ಬಳಿಯ ಪುಟ್ ಪಾತಿನಲ್ಲಿ ನಿಂತಿದ್ದ ನನ್ನ ತಂದೆಗೆ ಲಾರಿಯ ಹಿಂಭಾಗದ ಕಬ್ಬಿಣದ ಕಂಟೇನರ್ ಜೋರಾಗಿ ಗುದ್ದಿ ನನ್ನ ತಂದೆ ಕೆಳಗೆ ಬಿದ್ದರು. ನನ್ನ ತಂದೆಯವರ ಕಾಲುಗಳಿಗೆ ಹಾಗೂ ತಲೆಗೆ ತೀರ ಪೆಟ್ಟಾಗಿದ್ದು, ಅಲ್ಲಿಯೆ ಇದ್ದ ಚಾಸಾ-3 ನನ್ನ ಅಣ್ಣ ಚಾಸಾ-10 ರವರಿಗೆ ವಿಚಾರವನ್ನು ತಿಳಿಸಿದರು, ನನ್ನ ಅಣ್ಣ ಆ್ಯಂಬುಲೆನ್ಸ್ ಗೆ ಪೋನ್ ಮಾಡಿ ನನ್ನ ತಂದೆಯನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿದ್ದರು. ಆಸ್ಪತ್ರೆಯಲ್ಲಿ ವೈದ್ಯರು ನನ್ನ ತಂದೆ ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ನಾನು ಅದೇ ದಿನ ಪೊಲೀಸರಿಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪೊಲೀಸರು ಸ್ಥಳಕ್ಕೆ ಬಂದು ಘಟನಾ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 3 ರಿಂದ 4 ಗಂಟೆ ಬರೆದು ನನ್ನ ಸಹಿ ಪಡೆದರು. ಅದೇ ಸಮಯದಲ್ಲಿ ಅಪಘಾತ ಮಾಡಿದ್ದ ಲಾರಿಯನ್ನು ಅಮಾನತ್ತುಪಡಿಸಿಕೊಂಡರು. ಪಂಚನಾಮೆಯ ಕಾಲದಲ್ಲಿ ಚಾಸಾ-5 ಮತ್ತು 6 ರವರು ಇದ್ದರು. ಸಾಕ್ಷಿಯು ಪಂಚನಾಮೆಯಲ್ಲಿದ್ದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ)

ಎಂದು ಗುರುತಿಸಲಾಯಿತು. 2 ಪೋಟೋಗಳಲ್ಲಿನ ಲಾರಿ ಕಂಟೇನರ್ ನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದು, ರೂ.300/- ಖರ್ಚಿನೊಂದಿಗೆ ಸಮಯ ನೀಡಲಾಯಿತು.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**